ಜಿ.ವಿ. ಆನಂದಮೂರ್ತಿ

ಕಲೆ: ಬಸವರಾಜಾಚಾರ್ ಕೆ.ಆರ್.

# ಮಳೆಯ ಹೆಸರಿನ ಹುಡುಗಿ

ನನಗೆ ಎಲ್ಲ ನೆನಪಾಗುತ್ತಿದೆ, ಸುಡು ಬೇಸಗೆಯ ಕೊನೆಯ ದಿನಗಳು ಅವು:

ಒಂದು ಮಧ್ಯಾಹ್ನ. ನಾನು ಕೆಲಸ ಮಾಡುತ್ತಿದ್ದ ಬಹುಮಹಡಿಯ ಕಟ್ಟಡದ ಒಂದು ಮುರುಕು ನೆರಳಿನಲ್ಲಿ ರೊಟ್ಟಿ ತಿನ್ನುತ್ತಾ ಕುಳಿತಿದ್ದೆ. ಅಲ್ಲಿಗೆ ಸಮೀಪದಲ್ಲಿ ಉರಿಬಿಸಿಲಿನಲ್ಲಿ ತೋಯ್ದು ತೊಪ್ಪೆಯಾಗಿದ್ದ ಏಳೆಂಟು ವಯಸ್ಸಿನ ಪುಟ್ಟ ಹುಡುಗಿಯೊಬ್ಬಳು, ದಾರಿಯಲ್ಲಿ ಹೋಗಿ ಬರುವವರ ಮುಂದೆ ಕೈ ಚಾಚಿ ಅಂಗಲಾಚುತ್ತಿದ್ದಳು. ಚಳಿಗಾಲದ ಮರದಂತೆ ಬಡಕಲಾಗಿದ್ದಳು. ಗಂಟುಬಿದ್ದ ಕೂದಲು, ಹರಿದ ಲಂಗ, ದೈನ್ಯತೆಯನ್ನು ಕಳೆದುಕೊಳ್ಳದ ಕಣ್ಣುಗಳು, ಯಾವಾಗಲೂ ತೆರೆದೇ ಇರುತ್ತಿದ್ದ ಅವಳ ಪುಟ್ಟ ಬೊಗಸೆ. ಕೆನೆಗಟ್ಟಿದ ಒರಟು ಕೆನ್ನೆಗಳು, ಒಣಗಿದ ತುಟಿಗಳು, ಮರದ ಕೊರಡಿನಂತಿದ್ದ ಪಾದಗಳು. ನನ್ನ ಕಣ್ಣುಗಳು ಅವಳ ಮೇಲೆಯೇ ನೆಟ್ಟವು. ಹಾಗೆಯೇ ನೋಡುತ್ತಿದ್ದೆ. ಕೆಲವರು ಅವಳ ಕೈಗೆ ಪುಡಿಗಾಸು ಕೊಟ್ಟು, ಅವಳ ದೃಷ್ಟಿಯಿಂದ ತಪ್ಪಿಸಿಕೊಂಡು ಹೋಗುತ್ತಿದ್ದರು. ಇನ್ನೂ ಕೆಲವರು ಅವಳಿಗೆ, 'ದುಡಿದು ತಿನ್ನು ಹೋಗು...' ಎಂದು ಗಟ್ಟಿಯಾಗಿ ಗದರಿಕೊಂಡು ದರ್ಪದಿಂದ ನಡೆಯುತ್ತಿದ್ದರು. ಕುಳ್ಳನೆಯ ವ್ಯಕ್ತಿಯೊಬ್ಬ ತನ್ನ ದಾರಿಗೆ ಅಡ್ಡಬಂದು ಕೈವೊಡ್ಡಿದ್ದಕ್ಕೆ ಬಾಲಕಿ ಮೇಲೆ ಸಿಡಿಮಿಡಿಗೊಂಡು, 'ಅಪಶಕುನ ಎದುರಾಯ್ತು...' ಎಂದು ಗೊಣಗುತ್ತಾ ಅವಳನ್ನು ಹೊಡೆಯಲು ಕೈಯೆತ್ತಿದ. ಅದನ್ನು ನೋಡಿ ನನ್ನ ಕರುಳು ಚುರಕ್ ಎಂದಿತು. ಆ ವ್ಯಕ್ತಿ ನನಗೇ ಹೊಡೆದಂತಾಯಿತು! ಕೈಲ್ಲಿದ್ದ ರೊಟ್ಟಿಯನ್ನು ಹಾಗೆಯೇ ಹಿಡಿದುಕೊಂಡು ಎರಡೇ ಹೆಜ್ಜೆಗೆ ಅವಳತ್ತ ಧಾವಿಸಿದೆ.

ಅವಳನ್ನು ನೋಡುತ್ತಿದ್ದ ಹಾಗೆಯೇ 'ಅದು ನಾನೇ ಎನಿಸಿತು!' ಅವಳ 'ಬೇಡುವ ಕೈಗಳು' ನನ್ನವೇ ಆಗಿದ್ದವು. ನನ್ನ ಬಾಲ್ಯವೇ ಕಣ್ಣಮುಂದೆ ಮತ್ತೆ ಪುನರಾವರ್ತನೆಗೊಳ್ಳುತ್ತಿದೆಯೇನೋ ಅನಿಸಿತು! ಅವಳ ಈಗಿನ ಸ್ಥಿತಿ ನನ್ನ ಬಾಲ್ಯಕ್ಕಿಂತ ಭಿನ್ನವಾಗಿಯೇನೂ ಇರಲಿಲ್ಲ! ನಾನು ಸಮೀಪಿಸುತ್ತಿದ್ದಂತೆಯೇ ಭೀತಿಯಿಂದಲೇ ಬರೆದಂತಿದ್ದ ಅವಳ ಕಣ್ಣುಗಳು ಬೆದರಿದವು. ನವುರಾದ ಬಾಲ್ಯದ ತುಂಟತನ ಮತ್ತು ಮುಗ್ಧತೆ ಕಳೆದುಕೊಂಡ ಅದೇ ನಿಸ್ತೇಜ ಮತ್ತು ಅಂಜಿಕೆಯ ಮುಖ.